**D**

**CCE PR**
**UN-REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 22. 06. 2018 ] **ಸಂಕೇತ ಸಂಖ್ಯೆ : 01-K**

Date : 22. 06. 2018 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಶ್ರೀರಾಮನ ತಂದೆಯ ಹೆಸರೇನು ?<br>***ಉತ್ತರ :***<br>ಶ್ರೀರಾಮನ ತಂದೆಯ ಹೆಸರು ದಶರಥ. | |
| 2. | ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು ?<br>***ಉತ್ತರ :***<br>ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು ಮಾಡುವ ಅನ್ಯಾಯಗಳನ್ನು ಕುರಿತು ಬಿನ್ನಹ ಮಾಡಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಯಾರು ?<br>***ಉತ್ತರ :***<br>ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು. | |
| 4. | 'ಮಲೆಗಳಲ್ಲಿ ಮದುಮಗಳು' ಈ ಕಾದಂಬರಿಯನ್ನು ಬರೆದವರು ಯಾರು ?<br>***ಉತ್ತರ :***<br>'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಬರೆದವರು ಕುವೆಂಪುರವರು. | |
| 5. | 'ಗಾಂಡೀವಿ' ಎಂದು ಬಿರುದಾಂಕಿತರು ಯಾರು ?<br>***ಉತ್ತರ :***<br>'ಗಾಂಡೀವಿ' ಎಂಬ ಬಿರುದಾಂಕಿತರು ಅರ್ಜುನ. | |
| 6. | ಜೇಡರದಾಸೀಮಯ್ಯನವರು ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ಎಂದು ಹೇಳಿದ್ದಾರೆ ?<br>***ಉತ್ತರ :***<br>ಸತಿಪತಿಗಳೊಂದಾದವರ ಭಕ್ತಿ ಶಿವನಿಗೆ ಹಿತವೆನಿಸುತ್ತದೆ ಎಂದು ಜೇಡರದಾಸೀಮಯ್ಯನವರು ಹೇಳಿದ್ದಾರೆ. | |
| 7. | ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?<br>***ಉತ್ತರ :***<br>ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸವುದೋ ಎಂದು ಯೋಚಿಸಿತು. | |
| 8. | ದಿಕ್ಕಿಲ್ಲದೆ ನರಳಾಡುವ ದೀನರಿಗೆ ಕವಯಿತ್ರಿ ಏನಾಗಬೇಕೆಂದು ಬಯಸಿದ್ದಾರೆ ?<br>***ಉತ್ತರ :***<br>ದಿಕ್ಕಿಲ್ಲದೆ ನರಳಾಡುವ ದೀನರಿಗೆ ಕವಯಿತ್ರಿ ಊರುಗೋಲಾಗಬೇಕೆಂದು ಬಯಸಿದ್ದಾರೆ. | |
| 9. | ಸು.ರಂ. ಎಕ್ಕುಂಡಿಯವರ ಪ್ರಕಾರ ಯಾವುದು ಸರ್ವನಾಶದ ಸಿದ್ಧಿಯಾಗಿದೆ ?<br>***ಉತ್ತರ :***<br>ಸು.ರಂ. ಎಕ್ಕುಂಡಿಯವರ ಪ್ರಕಾರ ಮೋಹಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿಯಾಗಿದೆ. | |
| 10. | ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆಯೆಂದು ಗೋಕಾಕರು ಹೇಳಿದ್ದಾರೆ ?<br>***ಉತ್ತರ :***<br>ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ ಎಂದು ಗೋಕಾಕರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಕುರುಕುಲವೆಂಬ ತೋಟದಲ್ಲಿ ಉಳಿದಿರುವ 'ಪೆರ್ಮರ' ಯಾರು ?<br>***ಉತ್ತರ :***<br>ಕುರುಕುಲವೆಂಬ ತೋಟದಲ್ಲಿ ಉಳಿದಿರುವ 'ಪೆರ್ಮರ' ದುರ್ಯೋಧನ (ಸುಯೋಧನ). | |
| 12. | ಕಾಲಪಕ್ಷಿಯ ಕಣ್ಣುಗಳು ಯಾವುದೆಂದು ಬೇಂದ್ರೆಯವರು ಹೇಳಿದ್ದಾರೆ ?<br>***ಉತ್ತರ :***<br>ಕಾಲಪಕ್ಷಿಯ ಕಣ್ಣುಗಳು ಸೂರ್ಯ–ಚಂದ್ರರು ಎಂದು ಬೇಂದ್ರೆಯವರು ಹೇಳಿದ್ದಾರೆ. | |
| 13. | ಜಿ.ಎಸ್. ಶಿವರುದ್ರಪ್ಪನವರು ಕಾಡುಮೇಡುಗಳ ಸ್ಥಿತಿ ಏನಾಗಿದೆ ಎಂದು ಹೇಳಿದ್ದಾರೆ ?<br>***ಉತ್ತರ :***<br>ಜಿ.ಎಸ್. ಶಿವರುದ್ರಪ್ಪನವರು ಕಾಡುಮೇಡುಗಳ ಸ್ಥಿತಿ ಬರಡಾಗಿವೆ ಎಂದು ಹೇಳಿದ್ದಾರೆ. | |
| 14. | ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದವರು ಯಾರು ?<br>***ಉತ್ತರ :***<br>ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದವರು ಶ್ರೀಕೃಷ್ಣ. | |
| 15. | 'ನನ್ನಾಸೆ' ಕವನದಲ್ಲಿ ಕವಯಿತ್ರಿ ಮಣ್ಣಮೇಲೊಂದು ಮರವಾಗಿ ಯಾರಿಗೆ ನೆರಳಾಗಬೇಕು ಎಂದು ಆಸೆಪಟ್ಟಿದ್ದಾರೆ ?<br>***ಉತ್ತರ :***<br>'ನನ್ನಾಸೆ' ಕವನದಲ್ಲಿ ಕವಯಿತ್ರಿಯವರು ಮಣ್ಣಮೇಲೊಂದು ಮರವಾಗಿ ಪುಣ್ಯವಂತರಿಗೆ ನೆರಳಾಗಬೇಕು ಎಂದು ಆಸೆಪಟ್ಟಿದ್ದಾರೆ. | |
| 16. | ಪಾರಿವಾಳದ ಪುಟ್ಟಮರಿಗಳು ಯಾವುದರಲ್ಲಿ ಸಿಲುಕಿಕೊಂಡವು ?<br>***ಉತ್ತರ :***<br>ಪಾರಿವಾಳದ ಪುಟ್ಟಮರಿಗಳು ಬೇಡನೊಬ್ಬನು ಹರಡಿದ ಬಲೆಯಲ್ಲಿ ಸಿಲುಕಿಕೊಂಡವು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತಂದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ?<br>***ಉತ್ತರ :***<br>ಪಾಷಂಡ (ನಾಸ್ತಿಕ) ಸಾಗರಕ್ಕೆ ಮಹಾಬಡಬಾ ಮುಖಾಗ್ನಿಯಂತಿರುವವರು ಶ್ರೀರಂಗನಾಥನ ಪಾದಕಮಲಗಳಲ್ಲಿ ಮೂಲದಾಸರಾದವರು, ಶ್ರೀರಂಗನಾಥನ ಪಾದಕಮಲಗಳಲ್ಲಿ ಮೂಲದಾಸರಾದವರು ಶ್ರೀವಿಷ್ಣುಲೋಕ ಮುನಿಮಂಟಪಕ್ಕೆ ಮಾರ್ಗದಾಯಿಗಳು, ಯತಿರಾಜರುಗಳಿಗೆ ರಾಜರಾದವರು ಎಂದು ಧರ್ಮದೃಷ್ಟಿ ಪಾಠದಲ್ಲಿ ಶ್ರೀರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಕೊಂಡಾಡಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಮೂರು ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿ.<br>***ಉತ್ತರ :***<br>ವಿಶ್ವೇಶ್ವರಯ್ಯನವರು ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಮಾಡಿದ ಅಭಿವೃದ್ಧಿ ಕಾರ್ಯಗಳೆಂದರೆ; ಕಾವೇರಿನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ಯೋಜನೆ ಪ್ರಾರಂಭ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ, ಮಾರಿಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ ಇವುಗಳಾಗಿವೆ. | |
| 19. | ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ?<br>***ಉತ್ತರ :***<br>ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ಎಂದರೆ; ಒಂದು ದೇಹ, ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟು ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸರು. ಯಾವುದನ್ನೂ ಕೊಲ್ಲದೆ ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತ ಹೋದ ವಿಶಿಷ್ಟ ವ್ಯಕ್ತಿತ್ವ ಪರಮಹಂಸರದು. | |
| 20. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.<br>***ಉತ್ತರ :***<br>ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಕಲ್ಲನ್ನು ಎಡವಿ ಮೂರ್ಛೆ ಹೋದ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಗಾಡಿ ಹೊಡೆದುಕೊಂಡು ತಿಂಗಳ ಬೆಳಕಿನಲ್ಲಿ ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದಿದ್ದ ಸ್ಥಳದ ಹತ್ತಿರ ಬಂದಾಗ ಎತ್ತುಗಳು ಚಲಿಸದೆ ನಿಂತವು. ಆಗ ಹುಲಿಯ ಗರ್ಜನೆಯೂ ಕೇಳಿಬಂದಿತು. ರೈತರ ಮಾತು ಕೇಳಿದ ಹುಲಿ ಅಲ್ಲಿಂದ ಪಲಾಯನ ಮಾಡಿತು. ಆಗ ರೈತರು ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಗಲಭೆ ಮಾಡುತ್ತಾ ಪಂಜು ಹೊತ್ತಿಸಿಕೊಂಡು ಬರುತ್ತಿದ್ದಾಗ ಮೂರ್ಛೆಯಲ್ಲಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.<br>*ಉತ್ತರ :*<br>ಬಸವಣ್ಣನವರು ಮನುಷ್ಯನ ಚಂಚಲವಾದ ಮನಸ್ಸನ್ನು ಮರವನ್ನೇರಿದ ಮರ್ಕಟನಂತೆ ಕೊಂಬೆ ಕೊಂಬೆಗೆ ಹಾರುತ್ತಲಿರುತ್ತದೆ. ಅಂತಹ ಚಂಚಲ ಮನಸ್ಸು ದೇವರನ್ನು ಧ್ಯಾನ ಮಾಡಲು ಬಿಡುವುದಿಲ್ಲ. ನಾಯಿಯು ಪಲ್ಲಕ್ಕಿಯನ್ನು ಏರಿದ್ದರೂ ತನ್ನ ಮೊದಲಿನ ಸ್ವಭಾವದಂತೆ ಹೊಲಸು ಕಂಡೊಡೆ ಅತ್ತ ಹೋಗುತ್ತದೆ. ಹಾಗೆಯೇ ಮನುಷ್ಯನ ಸ್ವಭಾವವು ಸುಖದ ಕಡೆಗೆ ಹರಿಯುವುದರಿಂದ ಶಿವನನ್ನು ಸದಾ ನೆನೆಯಲು ಬಿಡುವುದಿಲ್ಲ ಎಂದು ಹೇಳಿದ್ದಾರೆ. | |
| 22. | 'ಗಡಿಯ ಆಚೆ–ಈಚೆ ಜೀವಿಗಳು ಹೇಗೆ ಶವವಾದವು' ಎಂಬುದನ್ನು ದು. ಸರಸ್ವತಿಯವರ ಮಾತುಗಳಲ್ಲಿ ಬರೆಯಿರಿ.<br>*ಉತ್ತರ :*<br>ಮಾನವನು ತಾನೇ ಮಣ್ಣಿನ ಮಾಲೀಕ ಎಂಬ ಅಹಂಕಾರದಿಂದ ಗೆರೆ ಎಳೆದು ಗಡಿ ಎಳೆದುಕೊಂಡನು. ಗಡಿ ನಿರ್ಮಿಸಿಕೊಂಡು ಬೇಧಭಾವ, ಅಸಮಾನತೆ ಸೃಷ್ಟಿಸಿಕೊಂಡು ಕಾದಾಟವಾದಾಗ ಅನೇಕ ಜೀವಗಳು ಶವವಾದವು. ಗಡಿಯ ಆಚೆ–ಈಚೆ ಹರಿದ ನೆತ್ತರು ಒಂದೇ ಆದರೂ ಗಡಿಯ 'ಮ್ಯಾಜಿಕ್'ನಿಂದ ಜೀವತೆತ್ತವರು ವೀರಮರಣ ಹೊಂದಿದರು. ಜೀವತೆಗೆದವರು ವೀರಯೋಧರಾದರು. ಆದರೆ ಒಡಲು ಅನುಭವಿಸುವ ಸಂಕಟಕ್ಕೆ ಗಡಿಯೂ ಇಲ್ಲ ಆಚೆ–ಈಚೆಯೂ ಇಲ್ಲ ಎಂಬುದು ದು. ಸರಸ್ವತಿಯವರ ಮಾತುಗಳಾಗಿವೆ. | |
| 23. | ಎಚ್. ನರಸಿಂಹಯ್ಯನವರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲುದು ?<br>*ಉತ್ತರ :*<br>ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲವಾದ ಸಮಸ್ಯೆಗಳನ್ನು ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗನ್ನು ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದಿಂದ ಪರಿಹರಿಸಲು ಸಾಧ್ಯ. ಆಗ ಮಾತ್ರ ವಿಶ್ವಧರ್ಮ ರೂಪಿತವಾಗಬಲ್ಲದು ಎಂದು ಎಚ್. ನರಸಿಂಹಯ್ಯನವರು ಅಭಿಪ್ರಾಯಪಟ್ಟಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು ?<br>***ಉತ್ತರ :***<br>ನಮ್ಮ ದೇಶ ಮತ್ತು ಇಡಿಯ ಜಗತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಬೇಕು. ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ಅನಂತರ ನಾವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ, ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದೆವು ಎಂಬ ತೃಪ್ತಿಯಾದರೂ ನಮಗೆ ಇರುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ. | |
| 25. | 'ಬೀಸುವ ಕಲ್ಲು' ಎಂಬ ಅರ್ಥ ಬರಲು ಜನಪದರು ಹೇಳಿರುವ ಒಗಟನ್ನು ಬರೆಯಿರಿ.<br>***ಉತ್ತರ :***<br>"ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು<br>ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ<br>ಕೈಗೆ ಹಲ್‌ಮುರ್ದು ಕೊಡುವೆನು" | |
| 26. | ಆದಿಕವಿ ಪಂಪನು ತನ್ನ ಹೆಸರನ್ನು ಬಂಡೆಯ ಮೇಲೆ ಏಕೆ ಕೆತ್ತಿಸಲಿಲ್ಲ ?<br>***ಉತ್ತರ :***<br>ಪಂಪನು ರನ್ನನ ಸಮಕಾಲೀನನಾದರೂ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸಿಕೊಳ್ಳಲಿಲ್ಲ. ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ಶತಮಾನಗಳ ಕಾಲ ಉಳಿಯುತ್ತದೆಂದು ತಿಳಿದಿದ್ದಿರಬಹುದು ಅಥವಾ ಭರತ ಚಕ್ರವರ್ತಿಯ ದಿಗ್ವಿಜಯ ಶಾಸನವನ್ನು ಕೆತ್ತಿಸುವ ಪ್ರಸಂಗವನ್ನು ಆದಿಪುರಾಣದಲ್ಲಿ ನಿರೂಪಿಸಿದ ಮೇಲೆ ಬಂಡೆಯ ಮೇಲೆ ಹೆಸರು ಕೊರೆಯಿಸುವುದು ವ್ಯರ್ಥ ಎಂಬ ಭಾವನೆ ಅವನಲ್ಲಿ ಗಟ್ಟಿಗೊಂಡಿರಬಹುದು. ಆದ್ದರಿಂದ ಪಂಪನು ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸಲಿಲ್ಲ ಎಂಬುದು ಆರ್. ನಿರ್ಮಲಾರವರ ಅನಿಸಿಕೆಯಾಗಿದೆ. | |
| 27. | 'ಧರ್ಮಸಮದೃಷ್ಟಿ' ಶಾಸನದಲ್ಲಿ ಬುಕ್ಕರಾಯನನ್ನು ಹೇಗೆಂದು ವರ್ಣಿಸಲಾಗಿದೆ ?<br>***ಉತ್ತರ :***<br>ವೀರಬುಕ್ಕರಾಯನು ಶ್ರೀಮತ್ ಮಹಾಮಂಡಳಕ್ಕೆ ಅಧೀಶ್ವರನು. ಶತ್ರುರಾಜರಿಗೆ ಸಿಂಹಸ್ವಪ್ನನು. ಕೊಟ್ಟ ಮಾತಿಗೆ ತಪ್ಪಿ ನಡೆಯುವ ರಾಜರಿಗೆ ದಂಡಿಸುವ ರಾಜನೂ ಆಗಿದ್ದಾನೆ. ಅಲ್ಲದೆ ಬುಕ್ಕರಾಯನು ಜನಾನುರಾಗಿಯೂ, ಧರ್ಮಸಹಿಷ್ಣುವೂ ಆಗಿದ್ದನು. ಹೀಗೆ ಧರ್ಮಸಮದೃಷ್ಟಿ ಶಾಸನದಲ್ಲಿ ಬುಕ್ಕರಾಯನನ್ನು ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಸಿದ್ಧಲಿಂಗಯ್ಯನವರು ಹೇಳಿದ ಕಥೆಯಲ್ಲಿ ಬರುವ ದೇವತೆ ಹಾಗೂ ಜನರ ನಡುವಿನ ಸಂವಾದ ಬರೆಯಿರಿ.<br>*ಉತ್ತರ :*<br>ಒಮ್ಮೆ ಕವಿ ಸಿದ್ಧಲಿಂಗಯ್ಯನವರು ದೇವನೂರು ಮಹಾದೇವ ಅವರಿಗೆ ಹೇಳಿದ ಕಥೆಯಲ್ಲಿ– ಚಾವಣಿ ಮಟ್ಟಕ್ಕೆ ಗುಡಿ ಬಂದಾಗ ಒಬ್ಬನ ಮೈಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆಗ ಜನರ ಮತ್ತು ದೇವತೆ ನಡುವೆ ಸಂವಾದ ನಡೆಯುತ್ತದೆ. "ಏನ್ರಯ್ಯ ಏನ್ ಮಾಡ್ತಾ ಇದ್ದೀರಿ ?" ಎಂದು ದೇವತೆ ಕೇಳಿದಾಗ "ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ" ಎಂದು ಜನರು ಉತ್ತರಿಸುತ್ತಾರೆ. "ಓಹೋ, ನನಗೆ ಗುಡಿಮನೆ ಕಟ್ತಾ ಇದ್ದೀರೋ ? ಹಾಗಾದರೆ ನಿಮಗೆಲ್ಲ ಮನೆ ಉಂಟಾ ನನ್ನ ಮಕ್ಕಳಾ ?" ಎಂದು ದೇವತೆ ಕೇಳಿದಾಗ "ನನಗಿಲ್ಲ ತಾಯಿ" ಎಂದು ಒಬ್ಬನು ಉತ್ತರಿಸುತ್ತಾನೆ. ಅದಕ್ಕೆ ದೇವತೆ "ಹಾಗಾದರೆ ನಿಮಗೆಲ್ಲ ಮನೆ ಆಗುವವರೆಗೆ ನನಗೂ ಮನೆ ಬೇಡ" ಎಂದು ದೇವತೆ ಉತ್ತರಿಸುತ್ತಾಳೆ. | |
| 29. | ಮೂರ್ತಿರಾಯರ ಅಭಿಪ್ರಾಯದಂತೆ ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?<br>*ಉತ್ತರ :*<br>ಶಾನುಭೋಗರು ಚಿಕ್ಕನಾಯಕನ ಹಳ್ಳಿಗೆ ಹೋಗಿ ಹಿಂದಿರುಗಿ ಮನೆಗೆ ವಾಪಸ್ಸಾಗುತ್ತಿದ್ದರು. ಮದಲಿಂಗನ ಕಣಿವೆ ಕಾಡುದಾರಿಯಲ್ಲಿ ಬರುತ್ತಿದ್ದಾಗ ರಸ್ತೆಗೆ ಸ್ವಲ್ಪದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿರುವುದನ್ನು ಕಂಡರು. ಆಗ ಶಾನುಭೋಗರು ಹುಲಿಗೆ ಅಭಿಮುಖರಾಗದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಏಕೆಂದರೆ ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿಕೊಲ್ಲುವುದಿಲ್ಲ ಎಂಬ ವಿಷಯವನ್ನು ಶಾನುಭೋಗರು ತಿಳಿದಿದ್ದರು. | |
| 30. | ಧರ್ಮಾಧಿಕರಣರು "ಈತನ ಮಾತು ಅಶ್ರುತಪೂರ್ವಮ್" ಎನ್ನಲು ಕಾರಣವೇನು ?<br>*ಉತ್ತರ :*<br>ದುಷ್ಟಬುದ್ಧಿಯು "ಹೊನ್ನನ್ನೆಲ್ಲ ನೀನೆ ತೆಗೆದುಕೊಂಡಿದ್ದೀಯೆ" ಎಂಬ ಕಳ್ಳತನದ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ. ಆಗ ಇಬ್ಬರೂ ನ್ಯಾಯಕ್ಕಾಗಿ ಧರ್ಮಾಧಿಕರಣರಲ್ಲಿಗೆ ಬಂದು ನಡೆದ ಎಲ್ಲಾ ಸಂಗತಿಯನ್ನು ಸವಿಸ್ತಾರವಾಗಿ ಹೇಳುತ್ತಾರೆ. ಆಗ ಸಭಾಸದರು ಹೊನ್ನನ್ನು ಧರ್ಮಬುದ್ಧಿಯೇ ತೆಗೆದುಕೊಂಡಿದ್ದಾನೆ ಎಂಬುದಕ್ಕೆ ಸಾಕ್ಷಿ ಉಂಟಾ ಎಂದು ಕೇಳಿದಾಗ ಹೊನ್ನನ್ನು ಇಡುವಾಗ "ನಾನು ಮತ್ತು ಈತನು ಅಲ್ಲದೆ ಬೇರೆ ಯಾವ ಮನುಷ್ಯರೂ ಇರಲಿಲ್ಲ" ಅದಕ್ಕೆ ಆಲದಮರ (ವಟವೃಕ್ಷ)ವೇ ಸಾಕ್ಷಿ ಎಂದು ದೃಷ್ಟಬುದ್ಧಿಯು ಹೇಳುತ್ತಾನೆ. ಆ ಸಂದರ್ಭದಲ್ಲಿ ಧರ್ಮಾಧಿಕರಣರು "ಈತನ ಮಾತು ಅಶ್ರುತ ಪೂರ್ವಮ್" ಎಂದು ಹೇಳಿ ಧರ್ಮಬುದ್ಧಿಯನ್ನು ನೀನು ಈ ಸಾಕ್ಷಿಯನ್ನು ಒಪ್ಪುವುದಾದರೆ ವೃಕ್ಷಸಾಕ್ಷಿ ಹೇಳಿದ್ದು ಹಿಂದೆ ಹೇಳಿದವರೂ, ಕೇಳಿದವರೂ ಯಾರೂ ಇಲ್ಲ ಎಂದು ಹೇಳುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | ಹಲಗಲಿಗೆ ದಂಡು ಬರಲು ಕಾರಣವೇನು ?<br>***ಉತ್ತರ :***<br>ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಕಾಯಿದೆಯನ್ನು ಹೊರಡಿಸಿದರು. ಹಲಗಲಿಯ ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರು 'ನಮ್ಮಲ್ಲಿರುವ ಆಯುಧವನ್ನು ಕೊಟ್ಟರೆ ನಾವು ಸತ್ತಂತೆ' ಎಂದು ಊರಿನ ಜನರಿಗೆಲ್ಲ ತಿಳಿಸಿ ದಂಗೆ ಎಬ್ಬಿಸಿದರು. ಬಲವಂತದಿಂದ ಆಯುಧವನ್ನು ಕಸಿದುಕೊಳ್ಳಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು. ಇದರಿಂದ ಕ್ರೋಧಗೊಂಡ ಕಾರಾ ಸಾಹೇಬನು ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗುಬಡಿದನು. | |
| 32. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.<br>***ಉತ್ತರ :***<br>ಮಹರ್ಷಿಗಳ ಆದೇಶದಂತೆ ಶ್ರೀರಾಮನು ಅಶ್ವಮೇಧಯಾಗವನ್ನು ಕೈಗೊಳ್ಳುತ್ತಾನೆ. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧಯಾಗ ಕುದುರೆಯನ್ನು ಎಲ್ಲಾ ರಾಜರೂ ಗೌರವಿಸಿ ಮುಂದೆ ಕಳುಹಿಸಿದಾಗ ಕುದುರೆಯು ಸಂಚರಿಸುತ್ತಾ ವಾಲ್ಮೀಕಿಯ ಆಶ್ರಮದ ಬಳಿಗೆ ಬಂದು ಆಶ್ರಮದಲ್ಲಿ ಚೆನ್ನಾಗಿ ಬೆಳೆದಿದ್ದ ಹಸುರನ್ನು ತಿನ್ನಲು ಮನಸೋತು ವಾಲ್ಮೀಕಿ ಆಶ್ರಮವನ್ನು ಪ್ರವೇಶಿಸಿತು. | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು."<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು ಡಾ॥ ವಿ.ಕೃ. ಗೋಕಾಕ್‌ರವರು ಬರೆದಿರುವ "ಜೀವನ ಪಾಠಗಳು" ಎಂಬ ಕೃತಿಯಿಂದ ಆಯ್ದ 'ಜೀವನದೃಷ್ಟಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಸಮಾಜದಲ್ಲಿ ಕಲೋಪಾಸಕನ ಮಹತ್ವವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಲೇಖಕರು ಹಿರಿಯ ಸಾಹಿತಿಯ ಈ ಮಾತನ್ನು ಉದಾಹರಿಸಿದ್ದಾರೆ.<br>ಸಮಾಜದ ಕಲ್ಯಾಣವನ್ನು ಪೋಷಿಸುವ ಒಂದು ಶಕ್ತಿಯು ಕಲೋಪಾಸಕನಲ್ಲಿ ಇರುವುದರಿಂದ, ಅವನನ್ನು ಪೋಷಿಸುವ ಹೊಣೆಯೂ ಸಮಾಜದ ಮೇಲಿರುತ್ತದೆ. ಅವನು ಅಂಗಡಿಗೆ ಹೋಗಲಿ, ಹೋಟೆಲಿಗೆ ಹೋಗಲಿ–ಅವನು ಕಲೋಪಾಸಕ ಎಂಬುದನ್ನು ತಿಳಿದ ಕೂಡಲೇ ಎಲ್ಲರೂ ಅವನ ಅವಶ್ಯಕತೆಗಳನ್ನು ಪೂರೈಸಬೇಕು.<br>ಸಂಘಜೀವಿಯಾದ ಮಾನವನು ಸಮಾಜದಲ್ಲಿ ತನ್ನ ಬದುಕಿನೊಂದಿಗೆ ಇತರರ ಬಗ್ಗೆಯೂ ಚಿಂತಿಸುವುದು ಅನಿವಾರ್ಯ. ಕಲೋಪಾಸಕನು ತನ್ನ ಸಾಧನೆಯಿಂದ ಸಮಾಜಕ್ಕೆ ಒಳಿತಾಗಬೇಕು ಎಂಬ ದೃಷ್ಟಿಕೋನವನ್ನು ಹೊಂದಿರುತ್ತಾನೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು ದುರ್ಗಸಿಂಹನು ಬರೆದಿರುವ 'ಪಂಚತಂತ್ರ' ಎಂಬ ಚಂಪೂಕಾವ್ಯದಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ಸುಳ್ಳುಸಾಕ್ಷಿ ಹೇಳುವಂತೆ ದುಷ್ಟಬುದ್ಧಿಯು ತಂದೆಯಾದ ಪ್ರೇಮಮತಿಯನ್ನು ಕೇಳಿಕೊಂಡಾಗ ಮಗನಿಗೆ ಬುದ್ಧಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ದುಷ್ಟಬುದ್ಧಿಯು ತನ್ನ ತಂದೆಯ ಕೈಹಿಡಿದು ನಿಮ್ಮ ಈ ಒಂದು ಮಾತಿನಿಂದ ಹಲವುಕಾಲ ಹಸಿಯದೆ ಊಟ ಮಾಡುವಷ್ಟು ಹಣವು ಪ್ರಾಪ್ತಿಯಾಗುತ್ತದೆ. ಆದ್ದರಿಂದ ಧರ್ಮಬುದ್ಧಿಯೇ ಚಿನ್ನದ ನಾಣ್ಯವನ್ನು ತೆಗೆದುಕೊಂಡಿದ್ದಾನೆಂದು ಸಾಕ್ಷಿ ಹೇಳಬೇಕೆಂದು ಕೇಳಿಕೊಂಡಾಗ ಪ್ರೇಮಮತಿಯು ಬುದ್ಧಿಮಾತನ್ನು ಹೇಳುತ್ತ 'ಅನ್ಯರ ಹಣವನ್ನು ಅಪಹರಿಸುವುದು, ನಂಬಿಕೆ ದ್ರೋಹ ಮಾಡುವುದು, ಒಡೆಯನಿಗೆ ಕೇಡು ಬಯಸುವುದು, ಎಲ್ಲವೂ ನಾಶವಾಗುವಂಥವು, ಎಲ್ಲವನ್ನೂ ತಿಳಿದ ಈ ನಿನ್ನ ಕೆಟ್ಟಬುದ್ಧಿಯು ನಮ್ಮ ಕುಲವನ್ನೆಲ್ಲ ಹಾಳುಮಾಡುವ ರೀತಿಯದ್ದಾಗಿದೆ ಎಂದು ಹೇಳುತ್ತಾನೆ.<br>ಕೆಟ್ಟ ಕೆಲಸ ಮಾಡುವವನು, ಬೇರೆಯವರಿಗೆ ಅನ್ಯಥಾ ತೊಂದರೆ ಕೊಡುವವನು ನಾಶವಾಗುತ್ತಾನೆ ಎಂಬ ನೀತಿಯು ಈ ಮಾತಿನಲ್ಲಿ ವ್ಯಕ್ತವಾಗಿದೆ. ಪ್ರೇಮಮತಿಯ ಈ ಮಾತಿನಲ್ಲಿ ಮುಂದಿನ ಕೆಟ್ಟ ಪರಿಣಾಮದ ಸೂಚನೆ ಪರಿಣಾಮಕಾರಿಯಾಗಿ ಮೂಡಿಬಂದಿದೆ. | |
| 35. | "ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ."<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು ಆದಿಕವಿ ಪಂಪನು ಬರೆದ 'ವಿಕ್ರಮಾರ್ಜುನ ವಿಜಯ' (ಪಂಪಭಾರತ)ದಿಂದ ಆಯ್ದ 'ಎಮ್ಮ ನುಡಿಗೇಳ್' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಧೃತರಾಷ್ಟ್ರನು ಮಗನಾದ ದುರ್ಯೋಧನನಿಗೆ ಬುದ್ಧಿ ಹೇಳುವ ಸಂದರ್ಭದಲ್ಲಿ ಈ ಮಾತುಬಂದಿದೆ.<br>ಮಹಾಭಾರತ ಯುದ್ಧದಲ್ಲಿ ಎಲ್ಲಾ ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಗಾಂಧಾರಿಯರು ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಸುಯೋಧನನಿಗೆ ಸಂಧಿಗೆ ಒಪ್ಪಿಕೊಳ್ಳುವಂತೆ ಬುದ್ಧಿಮಾತುಗಳನ್ನು ಹೇಳಲು ಯುದ್ಧಭೂಮಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ಧೃತರಾಷ್ಟ್ರನು "ರಾಜರಿಗೆ ಹಗೆತನವೂ, ಬಾಂಧವ್ಯವೂ ಮಾಡಿದ ಕಾರ್ಯದಿಂದ ಉಂಟಾಗುತ್ತದೆ ಎಂದು ದಂಡನೀತಿ ಶಾಸ್ತ್ರದಲ್ಲಿ ಹೇಳಿಲ್ಲವೇ ? ಇನ್ನು ಕೋಪಿಸಿಕೊಂಡು ಅರ್ಜುನನೊಡನೆ ಯುದ್ಧ ಮಾಡುವವರು ಯಾರೂ ಇಲ್ಲ. ಬಾಂಧವ್ಯಕ್ಕೆ ಒಂದು ಸ್ಥಳ, ದ್ವೇಷಕ್ಕೆ ಒಂದು ಸ್ಥಳ ಇದೆಯೇ ? ಆಲೋಚಿಸಿ ನೋಡು" ಎಂದು ಬುದ್ಧಿಮಾತು ಹೇಳುವ ಸಂದರ್ಭ ಮನಮುಟ್ಟುವಂತಿದೆ.<br>ಯುದ್ಧ, ಅಸೂಯೆ, ದ್ವೇಷ, ಕೀರ್ತಿಯ ಬೆನ್ನಹತ್ತಿ ಹೋದರೆ ಎಂತಹ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ದೂರಾಲೋಚನೆ ಧೃತರಾಷ್ಟ್ರನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. ಅಲ್ಲದೆ ಧೃತರಾಷ್ಟ್ರನ ಅಸಹಾಯಕತೆಯೂ ಇಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ಕಾಣದೆ ಹೋಯಿತು ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"<br>***ಉತ್ತರ :***<br>ಪ್ರಸ್ತುತ ಹೇಳಿಕೆಯನ್ನು ಡಾ।। ಬಿ.ಎಸ್. ಗದ್ದಗಿಮಠರವರ 'ಕನ್ನಡ ಜನಪದ ಗೀತೆಗಳು' ಎಂಬ ಸಂಪಾದಿತ ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಜಾನಪದ ಲಾವಣಿಯಿಂದ ಆರಿಸಿಕೊಳ್ಳಲಾಗಿದೆ. ಹಲಗಲಿಯ ದಂಗೆಯನ್ನು ಬಗ್ಗುಬಡಿಯಲು ಒಂದು ದಂಡು ದಾಳಿ ಮಾಡಿ ಇಡೀ ಗ್ರಾಮವನ್ನು ಲೂಟಿಮಾಡಿ ಬೆಂಕಿ ಇಟ್ಟು ನಾಶಗೊಳಿಸಿತು ಎಂದು ದಾಳಿಯ ಪರಿಣಾಮವನ್ನು ಲಾವಣಿಕಾರನು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಬ್ರಿಟಿಷ್ ಸರಕಾರ ಭಾರತದ ಮೇಲೆ ಹೇರಿದ ನಿಶ್ಶಸ್ತ್ರೀಕರಣದ ಕಾಯಿದೆಯನ್ನು ವಿರೋಧಿಸಿ ಹಲಗಲಿ ಬೇಡರು ದಂಗೆ ಎದ್ದರು. ಕಾರಾ ಸಾಹೇಬನು ಕಲಾದಗಿಯಿಂದ ದಂಡು ಕಳುಹಿಸಿದನು. ದಂಡು ಹಲಗಲಿಯನ್ನು ಮುತ್ತಿಗೆ ಹಾಕಿದಾಗ ರಕ್ತದ ಕಾಲುವೆಯೇ ಹರಿಯಿತು. ಕೊನೆಯಲ್ಲಿ ದಂಡು ಹಲಗಲಿಗೆ ಮುತ್ತಿಗೆ ಹಾಕಿ ಸಿಕ್ಕಸಿಕ್ಕ ವಸ್ತುಗಳನ್ನೆಲ್ಲ ದೋಚಿಕೊಂಡು ಬೆಂಕಿಹಚ್ಚಿ ಗುರುತು ಸಿಗದಂತೆ ಸರ್ವನಾಶ ಮಾಡಿದರು ಎಂದು ದಂಗೆಯ ತೀವ್ರತೆಯನ್ನು ಲಾವಣಿಕಾರ ವರ್ಣಿಸಿದ್ದಾನೆ.<br>ತಮಗೆ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಾಗ ವಿವೇಚನೆ ಇಲ್ಲದೆ ನಡೆದುಕೊಳ್ಳದಿದ್ದರೆ ಕೆಟ್ಟ ಪರಿಣಾಮಗಳನ್ನೇ ಎದುರಿಸಬೇಕಾಗುತ್ತದೆ ಎಂಬ ನೀತಿ ಹಲಗಲಿ ಬೇಡರ ದೇಶಾಭಿಮಾನದ ಈ ಹೋರಾಟದ ಲಾವಣಿಯಲ್ಲಿ ಸ್ವಾರಸ್ಯವಾಗಿ ವರ್ಣಿಸಲಾಗಿದೆ. | |
| 37. | "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ."<br>***ಉತ್ತರ :***<br>ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡರು ವಿರಚಿತ 'ದಿವಾನ್ ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಸಂಶೋಧನಾ ಗ್ರಂಥದಿಂದ ಆಯ್ದ 'ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಲೇಖಕರು ವಿಶ್ವೇಶ್ವರಯ್ಯನವರ ಕಾರ್ಯಸಾಧನೆಯನ್ನು ಜನರು ಮೆಚ್ಚಿ ಹೊಗಳಿದ ರೀತಿಯನ್ನು ವಿವರಿಸುತ್ತ ಈ ಮಾತನ್ನು ಹೇಳಿದ್ದಾರೆ.<br>ಅಂದಿನ ಮೈಸೂರು ಸಂಸ್ಥಾನದ ದಿವಾನರಾಗಿ ನೇಮಕಗೊಂಡ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ನ್ಯಾಯಾಂಗ ಮತ್ತು ಕಾರ್ಯಾಂಗಗಳ ಪ್ರತ್ಯೇಕತೆ, ಸಮರ್ಥ ಕಾರ್ಯನಿರ್ವಹಣೆಗೆ ಸಮಿತಿ ರಚನೆ, ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ಇತ್ಯಾದಿ ಜನಪರಕಾರ್ಯಗಳನ್ನು ಮಾಡಿದನ್ನು ಕಂಡು ಜನಮೆಚ್ಚುಗೆ ಗಳಿಸಿದರು ಎಂದು ವಿವರಿಸುವ ಸಂದರ್ಭದಲ್ಲಿ ಜನರು 'ಆದರ್ಶ ಪುರುಷರೊಬ್ಬರು ದಿವಾನರಾಗಿದ್ದು ಮೈಸೂರು ಸಂಸ್ಥಾನದ ಪುಣ್ಯವೇ ಸರಿ' ಎಂದು ಹಾಡಿ ಹೊಗಳಿದರು ಎಂದು ಹೇಳಿದ್ದಾರೆ.<br>ವ್ಯಕ್ತಿಯು ಸಮಾಜಮುಖಿಯಾಗಿ ಲಭಿಸಿದ ಅಧಿಕಾರವನ್ನು ಸಮರ್ಥವಾಗಿ ಬಳಕೆ ಮಾಡಿಕೊಂಡಾಗ ಜನಮನದಲ್ಲಿ ಶಾಶ್ವತಸ್ಥಾನ ಪಡೆಯಬಹುದು ಎಂಬುದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು." | |
| | ***ಉತ್ತರ :*** | |
| | ಪ್ರಸ್ತುತ ವಾಕ್ಯವನ್ನು ಸ.ಶಿ. ಭೂಸನೂರ ಮಠ ಅವರು ಸಂಪಾದಿಸಿರುವ 'ವಚನ ಸಾಹಿತ್ಯ ಸಂಗ್ರಹ' ಎಂಬ ಗ್ರಂಥದಿಂದ ಆಯ್ದ 'ವಚನ ಸೌರಭ' ಎಂಬ ಪದ್ಯಭಾಗದಿಂದ ಆರಿಸಿದ ಬಸವಣ್ಣನವರ ವಚನದಿಂದ ಆರಿಸಿಕೊಳ್ಳಲಾಗಿದೆ. ಬಸವಣ್ಣನವರು ನಮ್ಮ ನಡೆ–ನುಡಿ ಒಂದಾಗಿರಬೇಕು ಎಂದು ಮಾತಿನ ಮಹತ್ವವನ್ನು ಕುರಿತು ಹೇಳುವಾಗ ಈ ಮಾತು ಬಂದಿದ. | |
| | ನಮ್ಮ ಮಾತು ಮುತ್ತಿನಹಾರದಂತೆ, ಮಾಣಿಕ್ಯದ ದೀಪ್ತಿಯಂತೆ ಸ್ಫಟಿಕದ ಶಲಾಕೆಯಂತೆ ಇರಬೇಕು. ಅಂದರೆ ನಮ್ಮ ಮಾತು ಶುದ್ಧ, ಸ್ಪಷ್ಟ, ಮಿಗಿಲಾಗಿ ಅರ್ಥಪೂರ್ಣವಾಗಿದ್ದು ಅದರಂತೆ ನಡೆದಾಗ ಮಾತ್ರ ಸುಖೀ ಸಮಾಜ ನಿರ್ಮಾಣವಾಗಬಲ್ಲದು ಎಂಬುದನ್ನು ಬಸವಣ್ಣನವರು ಮಾತಿನ ಮಹತ್ವವನ್ನು ಕುರಿತು ತಮ್ಮ ವಚನದಲ್ಲಿ ವಿಶ್ಲೇಷಿಸಿದ್ದಾರೆ. | |
| | ನಮ್ಮ ನಡೆ–ನುಡಿ ಒಂದಾಗಿದ್ದರೆ ಮಾತ್ರ ದೇವರು ಒಲಿಯುತ್ತಾನೆ. ಅಂತರಂಗ ಮತ್ತು ಬಹಿರಂಗ ಶುದ್ಧವಾಗಿದ್ದಾಗ ಮಾತ್ರ ಜೀವನದಲ್ಲಿ ಪರಿಪೂರ್ಣತೆ ಪಡೆಯಬಹುದು ಎಂಬುದು ಬಸವಣ್ಣನವರ ವಚನದಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |
| | **ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ / ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಪು.ತಿ. ನರಸಿಂಹಾಚಾರ್ : | |
| | ***ಉತ್ತರ :*** | |
| | ಕನ್ನಡದ ನವೋದಯದ ಕವಿಗಳಲ್ಲಿ ಒಬ್ಬರಾದ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ ಇವರು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಇವರ ಕಾಲ ಕ್ರಿ.ಶ. ೧೯೦೫. ಇವರ ಪ್ರಮುಖ ಕೃತಿಗಳೆಂದರೆ: ಅಹಲ್ಯೆ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀ ಹರಿಚರಿತೆ, ರಥಸಪ್ತಮಿ ಇತ್ಯಾದಿ. | |
| | ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀ ಹರಿಚರಿತೆ' ಕಾವ್ಯಕೃತಿಗೆ 'ಪಂಪ ಪ್ರಶಸ್ತಿ' ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. | |
| | ಪು.ತಿ. ನರಸಿಂಹಾಚಾರ್ಯರವರು ೧೯೮೧ ರಲ್ಲಿ ಚಿಕ್ಕಮಗಳೂರಿನಲ್ಲಿ ಸಮಾವೇಶಗೊಂಡ ೫೩ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

40. ಕವಿ ಲಕ್ಷ್ಮೀಶ :

***ಉತ್ತರ :***

ಕನ್ನಡ ಸಾಹಿತ್ಯದ ನಡುಗನ್ನಡದ ಪ್ರಸಿದ್ಧ ಕವಿ ಲಕ್ಷ್ಮೀಶನು ಹುಟ್ಟಿದ್ದು ಕಡೂರು ತಾಲೂಕಿನ ದೇವನೂರಿನಲ್ಲಿ. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಈತನ ಕಾಲ ಕ್ರಿ.ಶ. ೧೫೫೦. ಉಪಮಾಲಂಕಾರವನ್ನೆ ತನ್ನ ಕಾವ್ಯದಲ್ಲಿ ಹೆಚ್ಚಾಗಿ ಬಳಸಿ ವಾರ್ಧಕ ಷಟ್ಪದಿಯಲ್ಲಿ ಕೃತಿ ರಚನೆ ಮಾಡಿರುವ ಈತ 'ಉಪಮಾಲೋಲ' ಎಂಬ ಅಭಿದಾನವನ್ನು ಪಡೆದಿದ್ದಾನೆ. 'ಜೈಮಿನಿ ಭಾರತ' ಈತನು ಬರೆದ ಪ್ರಸಿದ್ಧವಾದ ಕೃತಿ. ಅಲ್ಲದೆ 'ಕರ್ಣಾಟಕವಿಚೂತವನ ಚೈತ್ರ' ಎಂಬ ಬಿರುದನ್ನು ಹೊಂದಿದ್ದಾನೆ.

41. **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** $1 \times 4 = 4$

ಕೊರಳ ಸೆರೆ ಹಿಗ್ಗಿದವು ದೃಗುಜಲ
.................................................................................
.................................................................................
.................................................................................
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

***ಅಥವಾ***

ಮಾರಿಗೌತಣವಾಯ್ತು ನಾಳಿನ
.................................................................................
.................................................................................
.................................................................................
ವೀರರೈವರ ನೋಯಿಸೆನು ರಾಜೀವಸಖನಾಣೆ ॥

***ಉತ್ತರ :***

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

**ಅಥವಾ**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯಿ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ<br>ಮಂಡಲ–ಗಿಂಡಲಗಳ ಗಡ ಮುಕ್ಕಿ<br>ತೇಲಿಸಿ ಮುಳುಗಿಸಿ ಖಂಡ–ಖಂಡಗಳ<br>ಸಾರ್ವಭೌಮರಾ ನೆತ್ತಿಯ ಕುಕ್ಕಿ<br>ಹಕ್ಕಿ ಹಾರುತಿದೆ ನೋಡಿದಿರಾ ? | |
| | ***ಉತ್ತರ :*** | |
| | ಚಲನಶೀಲತೆ ಜೀವಂತಿಕೆಯ ಗುಣ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಕವಿ ಬೇಂದ್ರೆಯವರು ಕಾಲಚಕ್ರದಲ್ಲಿ ನಡೆದಿರುವ ಭೂಮಂಡಲದ ರಾಜಕೀಯ ಹಾಗೂ ಪ್ರಾಕೃತಿಕ ಬದಲಾವಣೆಗಳನ್ನು ಕುರಿತು ಪ್ರಸ್ತುತ ಪದ್ಯಭಾಗದಲ್ಲಿ ವರ್ಣಿಸಿದ್ದಾರೆ. | |
| | ಕಾಲ ಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸಿ ಅವುಗಳ ಅವನತಿಯನ್ನು ತೋರ್ಪಡಿಸಿದೆ. ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು ಕೋಟೆಕೊತ್ತಲಗಳನ್ನು ನಾಶಗೊಳಿಸಿ ಕಾಲಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿಸಿ, ಪ್ರಾಕೃತಿಕ ಬದಲಾವಣೆಗೂ ಕಾರಣವಾಗಿದೆ. ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿನಿಂತಿದೆ ಎಂದು ಕವಿ ವರ್ಣಿಸಿದ್ದಾರೆ. ಅಂದರೆ ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕಾಗುತ್ತದೆ ಎಂಬ ಆಶಯ ಮತ್ತು ಮೌಲ್ಯ ಈ ಪದ್ಯದಲ್ಲಿ ವ್ಯಕ್ತವಾಗಿದೆ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತ ಪ್ರಸಂಗದ ಸ್ವಾರಸ್ಯವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ. | |
| | ***ಅಥವಾ*** | |
| | ಅಮೆರಿಕಾದ ಮಗಳ ಮನೆಯಲ್ಲಿ ವಿದ್ಯುತ್ ಒಲೆಯಿಂದ ಉಂಟಾದ ತೊಂದರೆಯನ್ನು ಗೊರೂರರು ಪರಿಹರಿಸಿಕೊಂಡ ಸನ್ನಿವೇಶವನ್ನು ಕುರಿತು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಉತ್ತರ :*

ಗೊರೂರರು ಅಮೇರಿಕಾದಲ್ಲಿದ್ದ ತಮ್ಮ ಮಗಳ ಮನೆಗೆ ಹೋಗಿದ್ದಾಗ, ಅವರ ಅಳಿಯ ಮತ್ತು ಮಗಳು ಇಬ್ಬರೂ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ವಿದ್ಯುತ್ ಒಲೆಯಿಂದ 'ಕೊಯ್' ಎಂಬ ಶಬ್ದ ಬರತೊಡಗಿತು. ಆ ಸಂದರ್ಭದಲ್ಲಿ ಮನೆಯಲ್ಲಿ ಗೊರೂರರು ಮತ್ತು ಅವರ ಹೆಂಡತಿ ಇಬ್ಬರೆ ಇದ್ದಿದ್ದರಿಂದ, ಅಮೆರಿಕಾದ ವಿದ್ಯುತ್ ಒಲೆಗಳ ಹೊಸ ಜೋಡಣೆಗಳ ಬಗ್ಗೆ ತಿಳಿದಿರದಿದ್ದರಿಂದ ಭಯವಾಗಿ ಅವರ ಹೆಂಡತಿ ಮಗಲು ಮನೆಯಿಂದ ಯಾರನ್ನಾದರೂ ಕರೆದುಕೊಂಡು ಬರಲು ತಿಳಿಸಿದರು. ಆದರೆ ಅಲ್ಲಿ ಯಾರೂ ಇಲ್ಲದಿದ್ದರಿಂದ, ವಿದ್ಯುತ್ ಕೊಂಬು ಒಂದೇ ಸಮನೆ ಕೂಗಿಕೊಳ್ಳುತ್ತಲೇ ಇದ್ದುದರಿಂದ ಭಯವಾಗಿ, ಮನೆಯ ಹತ್ತಿರದಲ್ಲೇ ಪಾಠಶಾಲೆ ಇರುವುದನ್ನು ಕಂಡು ಅವರ ಹೆಂಡತಿ 'ಆ ಸ್ಕೂಲಿಗೆ ಹೋಗಿ ಯಾರನ್ನಾದರೂ ಹುಡಗರನ್ನೋ, ಮೇಷ್ಟ್ರನ್ನೊ ಕರೆದುಕೊಂಡು ಬನ್ನಿ, ಮನೆಸುಟ್ಟು ಹೋಗುವುದರ ಒಳಗಾಗಿ ಬನ್ನಿ!" ಎಂದು ಎಚ್ಚರಿಸಿದರು. ಹೆಂಡತಿಯ ಸಲಹೆಯಂತೆ ಸ್ಕೂಲಿನ ಆವರಣವನ್ನು ಪ್ರವೇಶಿಸಿದ ಕೂಡಲೇ ಮಕ್ಕಳೆಲ್ಲ ಹೆದರಿ ಶಾಲೆಯ ಬ್ಯಾಡ್‌ಮಿಂಟನ್ ಹಾಲ್‌ಗೆ ನುಗ್ಗಿದರು. ಅವರ ವೇಷಭೂಷಣಗಳನ್ನು ಕಂಡ ಸ್ಕೂಲಿನವರು ವಿಚಿತ್ರ ಪ್ರಾಣಿ ಎಂಬಂತೆ ನೋಡಿದರು.

ಗೊರೂರರು ಎಂಟೂವರೆ ಮೊಳ ಉದ್ದ ದಪ್ಪವಾದ ಖಾದಿ ಕಚ್ಚೆ ಪಂಚೆ ಅದಕ್ಕೆ ಅಗಲವಾದ ಕೆಂಪು ಕಂಬಿ, ಜರಿಗೆರೆಗಳು, ಕೆಂಪು ಉಣ್ಣೆಯ ಶಾಲು, ತಲೆಗೆ ಮಫ್ಲರ್, ಕಾವಿಬಣ್ಣದ ನೀಳ ಜುಬ್ಬ, ಹಣೆಯಲ್ಲಿ ಕೆಂಪು ನಾಮ, ಬಿಳಿಕೂದಲು, ಗಡ್ಡ, ಮೀಸೆ ಹೀಗೆ ಭಾರತೀಯ ಸಂಸ್ಕೃತಿಯ ಅಚ್ಚೊತ್ತಿದಂತಿದ್ದ ಅವರ ಧಿರಿಸು ಏಳೆಂಟು ಬಣ್ಣಗಳಿಂದ ಕೂಡಿತ್ತು. ಅವರನ್ನು ಕಂಡ ಉಪಾಧ್ಯಾಯರು ನಕ್ಕರು. ಆಗ ಹುಡುಗರೆಲ್ಲ ಪೈಡ್‌ಪೈಪರ್, ಸಂತಾಕ್ಲಾಸ್ ಎಂದೆಲ್ಲ ಕೂಗಿದರು. ಉಪಾಧ್ಯಾಯರು ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ. ದಯವಿಟ್ಟು ಕುಳಿತುಕೊಳ್ಳಿ, ನಿಮಗೆ ಏನಾಗಬೇಕು ? ಎಂದು ಕುರ್ಚಿ ತೋರಿಸಿದರು. ಅಮೆರಿಕಾದಂತ ಚಳಿಯ ಪ್ರದೇಶದಲ್ಲೂ ಅವರು ಧರಿಸಿದ್ದ ಉಡುಪನ್ನು ಕಂಡು ಉಪಾಧ್ಯಾಯಿನಿಯೊಬ್ಬರು "ನಿಮಗೆ ಚಳಿಯಾಗುವುದಿಲ್ಲವೇ ? ನೀವು ಎಲ್ಲಿಂದ ಬಂದಿರುವಿರಿ ?" ಎಂದು ಕೇಳಿದಾಗ ಗೊರೂರರು ತಮ್ಮ ಉಡುಪಿನ ಬಗ್ಗೆ, ಗಾಂಧಿತತ್ವ, ಖಾದಿಬಟ್ಟೆಯ ಮಹತ್ವ, ಭಾರತದ ಹವಾಮಾನಗಳ ಬಗ್ಗೆ ವಿವರಿಸುತ್ತ ತಾವು ಶಾಲೆಗೆ ಹೋದ ಉದ್ದೇಶವನ್ನೇ ಮರೆತುಬಿಟ್ಟರು. ಅವರ ಹೆಂಡತಿ ಬಂದು ಮುಂದೆ ನಿಂತಾಗಲೇ ಅವರಿಗೆ ಜ್ಞಾನೋದಯವಾಗಿದ್ದು. ಗಾಂಧೀಜಿಯವರ ಅನುಯಾಯಿಯಾಗಿದ್ದ ಗೊರೂರರು ತಮಗೆ ಸಿಕ್ಕ ಸಂದರ್ಭದಲ್ಲಿಯೇ ಗಾಂಧಿತತ್ವ, ಖಾದಿ ಮಹತ್ವದ ಹಿರಿಮೆಯನ್ನು ಸಾರಿದ್ದು ಇಲ್ಲಿ ಪ್ರಾಮುಖ್ಯವೆನಿಸುತ್ತದೆ.

**ಅಥವಾ**

ಅಮೆರಿಕಾದ ಮಗಳ ಮನೆಯಲ್ಲಿ ಗೊರೂರರು ವಿದ್ಯುತ್ ಒಲೆಯಿಂದ ಉಂಟಾದ ತೊಂದರೆಯನ್ನು ಪರಿಹರಿಸಿಕೊಂಡ ಸನ್ನಿವೇಶ :

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಮ್ಮೆ ಗೊರೂರರು ಅಮೆರಿಕಾದಲ್ಲಿರುವ ಮಗಳ ಮನೆಗೆ ಹೋಗಿದ್ದಾಗ ಮಗಳು ಮತ್ತು ಅಳಿಯ ಇಬ್ಬರೂ ಕೆಲಸಕ್ಕೆ ಹೋಗಿದ್ದರು. ಹೋಗುವ ಮೊದಲು ವಿದ್ಯುತ್ ಒಲೆಯನ್ನು 'ಆಫ್' ಮಾಡಿ ಹೋಗಿದ್ದರೂ, ಇದ್ದಕ್ಕಿದ್ದಂತೆ ಅಡುಗೆಮನೆಯಲ್ಲಿ ವಿದ್ಯುತ್ ಒಲೆಯಿಂದ 'ಕೊಯ್' ಎಂದು ಕೊಂಬಿನ ಧ್ವನಿಯಂತೆ ಸದ್ದು ಬರಲು ಪ್ರಾರಂಭಿಸಿತು. ವಿದ್ಯುತ್ ಒಲೆಗಳ ಹೊಸ ಬಗೆಯ ಜೋಡಣೆಗಳ ಬಗ್ಗೆ ಅರಿವಿರದ ಗೊರೂರರು ಮತ್ತು ಅವರ ಹೆಂಡತಿ 'ಯಾವುದನ್ನು ಮುಟ್ಟಿದರೆ ಏನೋ' ಎಂಬ ಭಯದಿಂದ ಮನೆಗೆ ಬೆಂಕಿ ಹೊತ್ತಿಕೊಂಡಿತು ಎಂಬ ಆತಂಕದಿಂದ ಸಹಾಯಕ್ಕಾಗಿ ಪಕ್ಕದ ಮನೆಗೆ ಹೋಗಿ ಯಾರನ್ನಾದರೂ ಕರೆತರಲು ಹೇಳಿದರು. ಪಕ್ಕದ ಮನೆಯ ಬಾಗಿಲು ಹಾಕಿದ್ದರಿಂದ ಹೆಂಡತಿಯ ಸಲಹೆಯಂತೆ ಪಕ್ಕದಲ್ಲಿರುವ ಸ್ಕೂಲಿನತ್ತ ಹೆಜ್ಜೆ ಹಾಕಿದರು. ಅಲ್ಲಿನ ಮಕ್ಕಳು ಮತ್ತು ಉಪಾಧ್ಯಾಯರು ಅವರ ವಿಚಿತ್ರವಾದ ಉಡುಪನ್ನು ಕಂಡು ಕುತೂಹಲದಿಂದ "ನಿಮ್ಮ ಉಡುಪು ಬಹಳ ವಿಚಿತ್ರವಾಗಿದೆ" ಎಂದು ಹೇಳಿದರು. ಆಗ ಗೊರೂರರು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಭಾರತದ ಖಾದಿಬಟ್ಟೆಯ ಮಹತ್ವ ಮತ್ತು ಗಾಂಧಿತತ್ವಗಳನ್ನು ವಿವರಿಸುತ್ತ ಪರಿಚಯ ಮಾಡಿಕೊಂಡು ತಮ್ಮ ಸಮಸ್ಯೆಯನ್ನು ತಿಳಿಸಿ, ಯಾರನ್ನಾದರೂ ಸಹಾಯಕ್ಕೆ ಕಳುಹಿಸುವಂತೆ ಕೇಳಿಕೊಂಡರು. ಆಗ ಉಪಾಧ್ಯಾಯರು ಬಲಿಷ್ಠನಾದ ಹುಡುಗನನ್ನು ಕರೆದು "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ" ಎಂದು ಹೇಳಿ ಕಳುಹಿಸಿ ಕೊಟ್ಟರು. ಅವರ ಜೊತೆಗೆ ಬಂದ ಹುಡುಗನು ಅಡುಗೆಮನೆಗೆ ಹೋಗಿ ವಿದ್ಯುತ್ ಒಲೆಗೆ ಸಂಬಂಧಿಸಿದ ಸಮಸ್ಯೆ ಎಂದು ತಿಳಿದು 'ಸ್ವಿಚ್'ನ್ನು ಪತ್ತೆಮಾಡಿ ಸಮಸ್ಯೆ ಪರಿಹರಿಸಿದನು. ಹೀಗೆ ಗೊರೂರರು ವಿದ್ಯುತ್ ಒಲೆಯಿಂದ ಉಂಟಾದ ಸಮಸ್ಯೆಯನ್ನು ನಿವಾರಿಸಿಕೊಂಡರು. ವಿದೇಶದಲ್ಲಿ ಪ್ರತಿಯೊಬ್ಬರೂ ಮಕ್ಕಳಾದಿಯಾಗಿ, ಸ್ವಲ್ಪಮಟ್ಟಿಗಾದರೂ ತಾಂತ್ರಿಕತೆ ಮತ್ತು ವಿದ್ಯುದ್ದೀಕರಣದ ಬಗ್ಗೆ ತಿಳಿದುಕೊಂಡಿರಬೇಕು ಎಂಬುದನ್ನು ಗೊರೂರರು ನವಿರಾದ ಹಾಸ್ಯದೊಂದಿಗೆ ನಿರೂಪಿಸಿದ್ದು ವಿಶೇಷವಾಗಿದೆ. | |
| 44. | ಜಿ.ಎಸ್. ಶಿವರುದ್ರಪ್ಪನವರು ನಾಳಿನ ಕನಸನ್ನು ಬಿತ್ತುವ ಸಲುವಾಗಿ ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ ? | |
| | ***ಅಥವಾ*** | |
| | ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ನಿಮ್ಮ ಮಾತಿನಲ್ಲಿ ವಿವರಿಸಿ. | |
| | ***ಉತ್ತರ :*** | |
| | ನಾಳಿನ ಕನಸನ್ನು ಬಿತ್ತುವ ಸಲುವಾಗಿ ಕೈಗೊಳ್ಳಬೇಕಾದ ಸಂಕಲ್ಪ : | |
| | ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ, ಸಂಸಾರದ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ, ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನೆಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳನ್ನು ಶುದ್ಧೀಕರಿಸುವ, ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬರಡಾಗಿರುವ ಕಾಡುಮೇಡುಗಳು ಹಚ್ಚಹಸುರಿನಿಂದ ಕಂಗೊಳಿಸಿ ಸಮೃದ್ಧವಾಗುವಂತಹ ವಸಂತ ಕಾಲವಾಗುವ, ಅಸಮಾನತೆಯಿಂದ ಅದಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಬೇಧಭಾವದಿಂದ ಮನುಜ ಮನುಜರ ನಡುವೆ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ, ಎಲ್ಲ ಮತಗಳು ಸಾಧನೆಯ ಹಾದಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು. ಸ್ವಾತಂತ್ರ್ಯಗಳಿಸುವುದೇ ಜೀವನದ ಏಕೈಕ ಸಂಕಲ್ಪ ಎಂದುಕೊಂಡ ರಾಷ್ಟಪಿತ ಮಹಾತ್ಮಾ ಗಾಂಧೀಜಿಯವರು ಸಾಧಕರೆನಿಸಿಕೊಂಡರು. ಅಂತೆಯೇ ಯಾವುದೇ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎಂಬುದು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ.<br>***ಅಥವಾ***<br>ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯ :<br>ಜೀವನದಲ್ಲಿ ದೃಢಸಂಕಲ್ಪ ಹೊಂದಿದರೆ ಸಾಲದು, ಆ ನಿಟ್ಟಿನಲ್ಲಿ ಕ್ರಿಯಾಶೀಲರಾದಾಗ ಮಾತ್ರ ಯಶಸ್ಸು ಲಭಿಸುತ್ತದೆ. ನಮ್ಮ ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನಾದರೂ ಧೈರ್ಯದಿಂದ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀ ಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ಗಿಡಮರಗಳನ್ನು ರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅದಃಪತನವನ್ನು ತಡೆಯಬಹುದು. ಸಮಾನತೆ ಮನೋಭಾವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ–ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಬಹುದು. ಎಲ್ಲಾ ಮತಗಳು ಸಾಧನೆಯ ದಾರಿದೀಪಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದು. ಭಯ ಸಂಶಯದಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದಲ್ಲಿ ಹೊಂಗನಸನ್ನು ಕಾಣಬಹುದು. ಹೀಗೆ ದೃಢ ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ "ಅಸಾಧ್ಯವಾದುದು ಯಾವುದೂ ಇಲ್ಲ" ಜೀವನದಲ್ಲಿ ಏನೆಲ್ಲವನ್ನು ಸಾಧಿಸಬಹುದು ಎಂಬುದನ್ನು ಜಿ.ಎಸ್. ಶಿವರುದ್ರಪ್ಪನವರು ಸರಳ ಸುಂದರವಾಗಿ 'ಸಂಕಲ್ಪ' ಭಾವಗೀತೆಯಲ್ಲಿ ಅಭಿವ್ಯಕ್ತಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**<br>ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾಲಂಬನಗೊಳಿಸಿ ಮೌರ್ಯವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮ ವಾಸಿಯಾಗುತ್ತಾನೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು, ಮೊದಲನೆಯದು ಪ್ರಕಾಶಯುದ್ಧ – ಸೂಚಿತಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ – ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ – ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತಕಾರ್ಯಾಚರಣೆ ನಡೆಸುವುದು. ಯಾವಾಗ ರಾಜ ಶತ್ರುಗಳಿಗಿಂತ ಬಲಿಷ್ಠನಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ನಡೆಯುವ ಮುಕ್ತ ಯುದ್ಧವೇ ಧರ್ಮಯುದ್ಧ.<br>*ಪ್ರಶ್ನೆಗಳು :*<br>ಅ) ಚಾಣಕ್ಯನು ಮೂರು ಬಗೆಯ ಯುದ್ಧಗಳನ್ನು ಹೇಗೆ ವಿವರಿಸಿದ್ದಾನೆ ?<br>ಆ) ಕೌಟಿಲ್ಯನ ವ್ಯಕ್ತಿ ವೈಶಿಷ್ಟ್ಯತೆ ಕುರಿತು ಬರೆಯಿರಿ.<br>***ಉತ್ತರ :***<br>ಅ) ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶಯುದ್ಧ – ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ – ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ – ಶತ್ರುಗಳ ಅಧಿಕಾರಿಗಳನ್ನು ನಾಶಪಡಿಸಲು ಗುಪ್ತಕಾರ್ಯಾಚರಣೆ ನಡೆಸುವುದು. ಹೀಗೆ ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳನ್ನು ವಿವರಿಸಿದೆ.<br>ಆ) ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾಲಂಬನಗೊಳಿಸಿ ಮೌರ್ಯವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮ ವಾಸಿಯಾಗುತ್ತಾನೆ. | $2 \times 2 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | 'ಶರಚ್ಚಂದ್ರ' ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಯಣ್ ಸಂಧಿ (ಬಿ) ಜಶ್ತ್ವ ಸಂಧಿ<br>(ಸಿ) ಶ್ಚುತ್ವ ಸಂಧಿ (ಡಿ) ಅನುನಾಸಿಕ ಸಂಧಿ<br>***ಉತ್ತರ :*** (ಸಿ) ಶ್ಚುತ್ವ ಸಂಧಿ | |
| 47. | 'ತಿನ್ನುತ್ತಾನೆ' ಈ ಕ್ರಿಯಾಪದದ ವಿಧ್ಯರ್ಥಕ ರೂಪ<br>(ಎ) ತಿನ್ನಲಿ (ಬಿ) ತಿನ್ನನು<br>(ಸಿ) ತಿಂದಾನು (ಡಿ) ತಿನ್ನುವನು<br>***ಉತ್ತರ :*** (ಎ) ತಿನ್ನಲಿ | |
| 48. | ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಚಿಹ್ನೆ<br>(ಎ) ಉದ್ಧರಣ (ಬಿ) ಪ್ರಶ್ನಾರ್ಥಕ<br>(ಸಿ) ಅರ್ಧವಿರಾಮ (ಡಿ) ಅಲ್ಪವಿರಾಮ<br>***ಉತ್ತರ :*** (ಡಿ) ಅಲ್ಪವಿರಾಮ | |
| 49. | ಶಾನುಭೋಗರು ಊರು ಸೇರಿಕೊಳ್ಳಲು ಬೇಗಬೇಗ ನಡೆದರು; ಆದರೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಈ ವಾಕ್ಯವು<br>(ಎ) ಮಿಶ್ರ ವಾಕ್ಯ (ಬಿ) ಸಾಮಾನ್ಯ ವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಸಿ) ಸಂಯೋಜಿತ ವಾಕ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ಕ್ರಿಯಾ ಸಮಾಸಕ್ಕೆ ಉದಾಹರಣೆ ಇದು<br>(ಎ) ಬೆಟ್ಟದಾವರೆ (ಬಿ) ಕಂಗೆಡು<br>(ಸಿ) ಕಡೆಗಣ್ಣು (ಡಿ) ಆ ಕಲ್ಲು<br>***ಉತ್ತರ :*** (ಬಿ) ಕಂಗೆಡು | |
| 51. | 'ಅಜಮಾಯಿಷಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ<br>(ಎ) ಫಾರ್ಸಿ (ಬಿ) ಇಂಗ್ಲಿಷ್<br>(ಸಿ) ಪೋರ್ಚುಗೀಸ್ (ಡಿ) ಉರ್ದು<br>***ಉತ್ತರ :*** (ಎ) ಫಾರ್ಸಿ | |
| 52. | 'ಸಹದೇವ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ<br>(ಎ) ರೂಢನಾಮ (ಬಿ) ಅನ್ವರ್ಥನಾಮ<br>(ಸಿ) ಸರ್ವನಾಮ (ಡಿ) ಅಂಕಿತನಾಮ<br>***ಉತ್ತರ :*** (ಡಿ) ಅಂಕಿತನಾಮ | |
| 53. | 'ಕಾರ್ಯಂ' ಪದವು ಈ ವಿಭಕ್ತಿಯಲ್ಲಿದೆ<br>(ಎ) ಪ್ರಥಮಾ (ಬಿ) ದ್ವಿತೀಯಾ<br>(ಸಿ) ತೃತೀಯಾ (ಡಿ) ಚತುರ್ಥಿ<br>***ಉತ್ತರ :*** (ಎ) ಪ್ರಥಮಾ | |
| 54. | ಯಾವುದಾದರೂ ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯವನ್ನು ಹೀಗೆನ್ನುತ್ತೇವೆ<br>(ಎ) ಅನುಕರಣಾವ್ಯಯ (ಬಿ) ಸಂಬಂಧಾರ್ಥಕಾವ್ಯಯ<br>(ಸಿ) ಸಾಮಾನ್ಯ ಅವ್ಯಯ (ಡಿ) ಭಾವಸೂಚಕಾವ್ಯಯ<br>***ಉತ್ತರ :*** (ಸಿ) ಸಾಮಾನ್ಯ ಅವ್ಯಯ | |
| 55. | ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಿದು<br>(ಎ) ಯಾರು (ಬಿ) ತಾವು<br>(ಸಿ) ನೀವು (ಡಿ) ನಾವು<br>***ಉತ್ತರ :*** (ಬಿ) ತಾವು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಸುತ್ತಮುತ್ತ : ಜೋಡಿಪದ :: ಇರುಳಿರುಳು : ......................... . | |
| | ***ಉತ್ತರ :*** ದ್ವಿರುಕ್ತಿ | |
| 57. | ಅಂಕುಶ : ಅಂಕುಸ :: ಅರ್ಕ : ......................... . | |
| | ***ಉತ್ತರ :*** ಎಕ್ಕ | |
| 58. | ನೇಸರ : ಸೂರ್ಯ :: ನೀರದ : ......................... . | |
| | ***ಉತ್ತರ :*** ಮೋಡ | |
| 59. | ಹಿರಿಮೆ : ತದ್ಧಿತಾಂತ ಭಾವನಾಮ :: ಮಾಡಲಿಕ್ಕೆ : ......................... . | |
| | ***ಉತ್ತರ :*** ಕೃದಂತಾವ್ಯಯ | |
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| | ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ | |
| | ***ಅಥವಾ*** | |
| | ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ | |
| | ನೊರ್ವನೇ ವೀರನಾತನ ಯಜ್ಞತುರಗಮಿದು | |
| | ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ । | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

***ಉತ್ತರ :***

| | | | | | | |
|---|---|---|---|---|---|---|
| ನ | ಜ | ಭ | ಜ | ಜ | ಜ | ರ |
| U U U | U — U | — U U | U — U | U — U | U — U | — U — |
| ಕುರುಕು | ಳನಂದ | ನಂ ಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾವೃತ್ತದ ಉದಾಹರಣೆಯಾಗಿದೆ.

***ಅಥವಾ***

| | | | | |
|---|---|---|---|---|
| ೫ | ೫ | ೫ | ೫ | |
| — U — | — — U | U U U U U | — — U | |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ | = ೨೦ |

| | | | | |
|---|---|---|---|---|
| ೫ | ೫ | ೫ | ೫ | |
| — U — | — U — | U U — U | U U U U U | |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು | = ೨೦ |

| | | | | | | | |
|---|---|---|---|---|---|---|---|
| ೫ | ೫ | ೫ | ೫ | ೫ | ೫ | ೨ | |
| — U U U | — U — | — U — | U U U — | — U — | U U U — | — | |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದ ಲೇ | ಖನವನೋ | ದಿ ॥ | = ೩೨ |

ಇದು ಮಾತ್ರಾಗಣ ಛಂದಸ್ಸಿನ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ.

61. **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** 1 × 3 = 3

| | |
|---|---|
| ಅಲಂಕಾರವನ್ನು ಹೆಸರಿಸುವುದು | 1 ಅಂಕ |
| ಲಕ್ಷಣ ಬರೆಯುವುದು | 1 ಅಂಕ |
| ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| ಒಟ್ಟು | 3 ಅಂಕಗಳು |

"ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ."

***ಅಥವಾ***

"ಮಾತುಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ."

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದ್ದರೆ ಅದು ಉಪಮಾಲಂಕಾರ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಸಮನ್ವಯ :* *ಉಪಮೇಯ* : ಒಳಗಿನ ಮಂದಿ ಗುಂಡು ಹೊಡೆಯುವುದು<br>*ಉಪಮಾನ* : ಮುಂಗಾರಿನ ಸಿಡಿಲು ಸಿಡಿಯುವುದು<br>*ಉಪಮಾ ವಾಚಕ :* ಹಾಂಗ (ಹೀಗೆ)<br>*ಸಮಾನಧರ್ಮ :* ಲುಪ್ತವಾಗಿದೆ (ಸಿಡಿಯುವುದು)<br>ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವ ಕ್ರಿಯೆಗೆ ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಹಾಂಗ ಎಂಬ ವಾಚಕದ ಮೂಲಕ ಹೋಲಿಸಿ ಲುಪ್ತವಾದ (ಸಿಡಿಯುವುದು) ಎಂಬ ಸಮಾನಧರ್ಮವನ್ನು ಹೇಳಿ ವರ್ಣಿಸಿರುವುದರಿಂದ ಇದು ಧರ್ಮಲುಪ್ತ ಉಪಮಾಲಂಕಾರದ ಲಕ್ಷ್ಯವಾಗಿದೆ.<br>**ಅಥವಾ**<br>*ಅಲಂಕಾರದ ಹೆಸರು* : ದೃಷ್ಟಾಂತಾಲಂಕಾರ<br>*ಲಕ್ಷಣ* : ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ತೋರಿ ಬಂದರೆ ಅದನ್ನು ದೃಷ್ಟಾಂತಾಲಂಕಾರ ಎನ್ನುವರು.<br>*ಸಮನ್ವಯ* : *ಉಪಮೇಯ :* ಊಟ ಬಲ್ಲವನಿಗೆ ರೋಗವಿಲ್ಲ (ಪ್ರತಿಬಿಂಬ)<br>*ಉಪಮಾನ :* ಮಾತುಬಲ್ಲವನಿಗೆ ಜಗಳವಿಲ್ಲ (ಬಿಂಬ)<br>ಇಲ್ಲಿ 'ಮಾತುಬಲ್ಲವನಿಗೆ ಜಗಳವಿಲ್ಲ' ಮತ್ತು 'ಊಟಬಲ್ಲವನಿಗೆ ರೋಗವಿಲ್ಲ' ಇವೆರಡೂ ಬೇರೆಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದಿರುವುದರಿಂದ ಇದು ದೃಷ್ಟಾಂತಾಲಂಕಾರದ ಲಕ್ಷ್ಯವಾಗಿದೆ.<br>(ಈ ಮೇಲಿನ ಲಕ್ಷ್ಯದಲ್ಲಿ ಬಿಂಬ (ಉಪಮಾನ) ಮತ್ತು ಪ್ರತಿಬಿಂಬ (ಉಪಮೇಯ) ದ ವಾಕ್ಯಗಳು ಅದಲು ಬದಲಾಗಿಯೂ ತಿಳಿಯಬಹುದು)<br>**ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :**<br>* ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ<br>* ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ<br>* ಹುಟ್ಟುಗುಣ ಘಟ್ಟ ಹತ್ತಿದರೂ ಹೋಗದು<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಸೋಮನಾಥಪುರದ ಸರ್ಕಾರಿ ಪ್ರೌಢಶಾಲೆಯ 'ಸಮೀರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಯೋಗ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿದ್ಯಾರ್ಥಿ ಮಿತ್ರ' ಪತ್ರಿಕಾ ಸಂಪಾದಕರಿಗೊಂದು ಮನವಿ ಪತ್ರ ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಆವಂತಿಪುರದ ಪ್ರಗತಿ ವಿದ್ಯಾಲಯದ 'ಅನ್ವೇಷ' ಎಂದು ಭಾವಿಸಿಕೊಂಡು, ಹಳೇಬೀಡಿನ ಲಕ್ಷ್ಮೀಪುರ ಬಡಾವಣೆಯಲ್ಲಿ ವಾಸವಾಗಿರುವ ಸಹೋದರಿ 'ಚಿರಂತ'ಳಿಗೆ 'ಶಾಲಾ ವಾರ್ಷಿಕೋತ್ಸವ'ದ ವಿವರವನ್ನು ತಿಳಿಸಿ ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಇವರಿಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಸಹೋದರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 64. | **ಪ್ರಬಂಧ ಬರೆವಣಿಗೆ :** | 1 × 5 = 5 |
| | ✳ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ | |
| | ✳ ಸಾವಯವ ಬೇಸಾಯದ ಪ್ರಾಮುಖ್ಯತೆ | |
| | ✳ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧಕ್ಕೆ | 1 ಅಂಕ |
| | ಒಟ್ಟು | 5 ಅಂಕಗಳು |